ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 01.08.2023.**

**ಮುಂದುವರೆದ ಪಾಟೀ ಸವಾಲು - ವಾದಿ ಪರ ವಕೀಲರಿಂದಃ**

14) ದಿನಾಂಕಃ 09.01.2023 ರ ಪಾಟೀ ಸವಾಲಿನಲ್ಲಿ ನನಗೆ 1 ನೇ ಪ್ರತಿವಾದಿ ಕೊಟ್ಟಿದ್ದ ವಂಶವೃಕ್ಷದ ಪ್ರಕಾರ 1 ನೇ ಪ್ರತಿವಾದಿಗೆ ಒಬ್ಬನೇ ಮಗ ಇರುವುದಾಗಿ ನಮೂದಾಗಿತ್ತು ಎಂದು ನಾನು ಹೇಳಿದ್ದು, ನ್ಯಾಯಲಾಯದ ಪರಿಶೀಲನೆಗಾಗಿ ನಾನು ಸದರಿ ವಂಶವೃಕ್ಷವನ್ನು ಹಾಜರು ಮಾಡಿದ್ದೀನಾ? ಎಂದರೆ ನನಗೆ ನೆನಪಿಲ್ಲ. 1 ನೇ ಪ್ರತಿವಾದಿ ನನಗೆ ಆ ರೀತಿಯ ಯಾವುದೇ ವಂಶವೃಕ್ಷವನ್ನು ಕೊಟ್ಟಿರಲಿಲ್ಲವಾದ್ದರೂ ನಾನು ಉದ್ದೇಶಪೂರಿತವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮುಂಚೆಯಿಂದಲೂ 1 ನೇ ಪ್ರತಿವಾದಿ ವೆಂಕಟಪ್ಪನಿಗೆ 3 ಜನ ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು ಇದ್ದಾರೆಂದು ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ಪ್ರಕಾರ 1 ನೇ ಪ್ರತಿವಾದಿಗೆ ಒಬ್ಬನೇ ಮಗನಿದ್ದು, ಆತನೇ 2 ನೇ ಪ್ರತಿವಾದಿ ವೆಂಕಟರೆಡ್ಡಿ ಎನ್ನುವುದು ಸರಿ. ನಾನು 2 ನೇ ಪ್ರತಿವಾದಿಯನ್ನು ಕ್ರಯಪತ್ರ ನೋಂದಣೆ ಮಾಡಿಸಿಕೊಳ್ಳುವಾಗ ನೋಡಿದ್ದೇನೆ. ನಾನು 4 ನೇ ಪ್ರತಿವಾದಿ ಮುನಿನಾರಾಯಣಪ್ಪನನ್ನು ನೋಡಿಲ್ಲ. ನನಗೆ 1 ನೇ ಪ್ರತಿವಾದಿ ಮತ್ತು 4 ನೇ ಪ್ರತಿವಾದಿ ಇಬ್ಬರು ಚೆನ್ನಾಗಿ ಪರಿಚಿತರು ಎಂದರೆ ನನಗೆ 1 ನೇ ಪ್ರತಿವಾದಿ ಮಾತ್ರ ಪರಿಚಯಸ್ಥ. ನನ್ನ ಕ್ರಯಪತ್ರ ನೋಂದಣೆಯಾಗುವ ಕಾಲಕ್ಕೆ ನಾನು 4 ನೇ ಪ್ರತಿವಾದಿ ಮುನಿನಾರಾಯಣಪ್ಪನನ್ನು ನೋಡಿರಲಿಲ್ಲ. ನಿಡಿ-1 ಕ್ರಯಪತ್ರದಲ್ಲಿ 2 ನೇ ಕ್ರಯದಾರನಾಗಿ ವೆಂಕಟರೆಡ್ಡಿ ಎಂದು ಸಹಿ ಮಾಡಿದ ವ್ಯಕ್ತಿಯೇ 4 ನೇ ಪ್ರತಿವಾದಿ ಮುನಿನಾರಾಯಣಪ್ಪ ಎಂದರೆ ಸರಿಯಲ್ಲ. ನನ್ನ ಪ್ರಕಾರ ಸದರಿ ವೆಂಕಟರೆಡ್ಡಿ ಕೇವಲ ತನ್ನ ಪರವಾಗಿ ಮಾತ್ರ ನನಗೆ ಕ್ರಯಪತ್ರ ಬರೆದುಕೊಟ್ಟಿದ್ದಾರೆ. ನಿಡಿ-1 ಕ್ರಯಪತ್ರದಲ್ಲಿ ಇರುವ ಕುಮಾರಿ ಭವಿಷ್ಯ ಮತ್ತು ಮಾಸ್ಟರ್ ಮನೋಜ್ ಕುಮಾರ ಯಾರು ಎಂದರೆ ಅವರು ವೆಂಕಟರೆಡ್ಡಿಯವರ ಮೈನರ್ ಮಕ್ಕಳು ಇರುತ್ತಾರೆ. ನಾನು ಕುಮಾರಿ ಭವಿಷ್ಯ ಮತ್ತು ಮಾಸ್ಟರ್ ಮನೋಜ್ ಕುಮಾರ ಇವರನ್ನು ನೋಡಿದ ಬಗ್ಗೆ ನೆನಪಿಲ್ಲ. ಕ್ರಯಪತ್ರ ಬರೆದುಕೊಡುವಾಗ ಅವರೂ ಕೂಡ ಹಾಜರಿದ್ದರೇ? ಎಂದರೆ ನನಗೆ

ನೆನಪಿಲ್ಲ. ವೆಂಕಟರೆಡ್ಡಿ ಮತ್ತು ಆತನ ಮಕ್ಕಳು ನನಗೆ ಕ್ರಯಪತ್ರ ಬರೆದುಕೊಡದೇ ಇದ್ದರೂ ನಾನು ಮತ್ತು 4 ನೇ ಪ್ರತಿವಾದಿ ಮುನಿನಾರಾಯಣಪ್ಪ ಶಾಮೀಲಾಗಿ ಕ್ರಯಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಿ.ಸಿ.ನಂ.127/2008 ರಲಂತೆ ದಾಖಲಾದ ಕ್ರಿಮಿನಲ್ ಪ್ರಕರಣದಲ್ಲಿ ನಾನೂ ಕೂಡ ಒಬ್ಬ ಸಾಕ್ಷಿದಾರ ಎಂದರೆ ಸರಿ. ಆ ಕ್ರಿಮಿನಲ್ ಮೊಕದ್ದಮೆಯಲ್ಲಿ ಈ ದಾವೆಯ 4 ನೇ ಪ್ರತಿವಾದಿ ಮುನಿನಾರಾಯಣಪ್ಪ ಆರೋಪಿಗಳಲ್ಲಿ ಒಬ್ಬರು ಎಂದರೆ ನನಗೆ ನೆನಪಿಲ್ಲ. ಸದರಿ ಕ್ರಿಮಿನಲ್ ಮೊಕದ್ದಮೆಯು ವಾದಿಗಳು ನನ್ನ ಮತ್ತು ಮುನಿನಾರಾಯಣಪ್ಪನ ವಿರುದ್ಧ ಕ್ರಯಪತ್ರ ಸೃಷ್ಟಿ ಮಾಡಿದ ಬಗ್ಗೆ ದಾಖಲು ಮಾಡಿದ್ದು, ಪೋಲಿಸರು ಮುನಿನಾರಾಯಣಪ್ಪನನ್ನು ಆರೋಪಿಯನ್ನಾಗಿ ಮಾಡಿ ನನ್ನನ್ನು ಮಾತ್ರ ಸಾಕ್ಷಿಯನ್ನಾಗಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಾನು, 1 ಮತ್ತು 4 ನೇ ಪ್ರತಿವಾದಿಗಳು ಶಾಮೀಲಾಗಿ ಸುಳ್ಳು ಕ್ರಯಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದೂ ಉದ್ದೇಶಪೂರಿತವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(**ಈ ಹಂತದಲ್ಲಿ **2** ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು**).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**